ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ 140/2015

ಚಾಸಾ - 7 ಫ್ರಾಸಾ- 5 ದಿನಾಂಕ 05.03.2020

ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಕೆ.ಎಸ್ ಸಿದ್ದಾಚಾರಿ |
| ತಂದೆಯ ಹೆಸರು | : | ಸಿದ್ದಾಚಾರಿ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಚಿನ್ನ-ಬೆಳ್ಳಿ ವ್ಯಾಪಾರಿ. |
| ವಾಸ | : | ಹಾಸನ. |

**ಮುಖ್ಯ ವಿಚಾರಣೆಃ ಸರ್ಕಾರದ ಪರ ಸ್ಪೆಷಲ್ ಪಿಪಿ ರವರಿಂದಃ**

ನಾನು ಹಾಸನದಲ್ಲಿ ಸುಮಾರು 24 ವರ್ಷಗಳಿಂದ ಅಕ್ಕಸಾಲಿಗನಾಗಿ ಕೆಲಸ ಮಾಡುತ್ತಿದ್ದೇನೆ.

2. ದಿಃ- 26-07-2013 ರಂದು ಹಾಸನದ ಕುವೆಂಪು ನಗರದಲ್ಲಿರುವ ಮಂಜುನಾಥರವರ ಮನೆಯಲ್ಲಿ ಚಿನ್ನ-ಬೆಳ್ಳಿಗಳನ್ನು ತೂಕ ಮಾಡಲು ಹಾಸನದ ಲೋಕಾಯುಕ್ತ ಇನ್ಸಪೆಕ್ಟರ್ ಗುರುರಾಜ್ ರವರು ನನ್ನನ್ನು ಕರೆಸಿದ್ದರು. ಆ ದಿನ ಬೆಳಿಗ್ಗೆ 11.15 ಗಂಟೆ ಸಮಯದಲ್ಲಿ ನಾನು ಸದರಿ ಮಂಜುನಾಥ್ ರವರ ಮನೆಗೆ ಹೋದೆನು. ಲೋಕಾಯುಕ್ತ ಪೊಲೀಸ್ ಹಾಗೂ ಅವರ ಸಿಬ್ಬಂದಿ, ಚಂದ್ರಮ್ಮ (ಚಾ.ಸಾಃ3), ಗೌರಿಶಂಕರ (ಚಾ.ಸಾಃ2), ಆರೋಪಿ ಮಂಜುನಾಥ್ ಮತ್ತು ಆತನ ಹೆಂಡತಿ ಇದ್ದರು.

3. ಆ ದಿನ ಸದರಿ ಮಂಜುನಾಥ್ ರವರ ಮನೆಯಲ್ಲಿ ಒಟ್ಟು 10 ಐಟಂ ಚಿನ್ನದ ಆಭರಣಗಳನ್ನು ಮತ್ತು 7 ಐಟಂ ಬೆಳ್ಳಿಯ ಆಭರಣಗಳನ್ನು ತೂಕ ಮಾಡಿದ್ದೇನೆ ಮತ್ತು ಸದರಿ ಆಭರಣಗಳ ಆ ದಿನದ ಮೌಲ್ಯವನ್ನು ನಿರ್ಧರಿಸಿದ್ದೇನೆ. ಈ ಬಗ್ಗೆ ಲೋಕಾಯುಕ್ತ ಪೊಲೀಸರು ಮಹಜರ್ ಬರೆದರು. ನಾನು ಸದರಿ ಮಹಜರಿಗೆ ಸಹಿ ಮಾಡಿದ್ದೇನೆ. ಈಗ ಸದರಿ ಮಹಜರನ್ನು ನೋಡಿದೆನು. ಅದನ್ನು ಈಗಾಗಲೇ ನಿಶಾನೆ ಪಿ-1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಹಿ ನೋಡಿದೆ. ಅದು ನನ್ನ ಸಹಿ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1(ಬಿ) ಎಂದು

ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿಯ ಪರ ಶ್ರೀ ಸಿ.ಎನ್.ವಿ ವಕೀಲರಿಂದಃ-

4. ನಾನು ಆ ದಿನ ಮಂಜುನಾಥ್ ರವರ ಮನೆಯಲ್ಲಿ ಸುಮಾರು 2 ಗಂಟೆ ಕಾಲ ಇದ್ದೆನು. ನಾನು ತೂಕ ಮಾಡಿದ ಚಿನ್ನ ಮತ್ತು ಬೆಳ್ಳಿಯ ಆಭರಣಗಳಿಗೆ ಸಂಬಂಧಪಟ್ಟಂತೆ, ಪೊಲೀಸರು ಮಹಜರ್ ಬರೆದು ನನ್ನ ಸಹಿ ಪಡೆದರು. ನಾನು ಸದರಿ ಮಹಜರನ್ನು ಓದಿ ನೋಡಿ ತಿಳಿದುಕೊಂಡು ಸಹಿ ಮಾಡಿದ್ದೇನೆ. ನಾನು ತೂಕ ಮಾಡಿದ ಚಿನ್ನ-ಬೆಳ್ಳಿ ವಸ್ತುಗಳ ವಿವರಗಳನ್ನು ಬಿಟ್ಟು ಸದರಿ ಮಹಜರಿನಲ್ಲಿ ಬೇರೆ ವಿವರಗಳು ಇಲ್ಲ.

5. **2013 ನೇ ಇಸವಿಯಲ್ಲಿ Hall Mark 91.6 Quality ಚಿನ್ನ ಚಾಲ್ತಿಯಲ್ಲಿತ್ತು. ಈಗಲೂ ಸಹ ಸದರಿ Quality ಚಿನ್ನ ಚಾಲ್ತಿಯಲ್ಲಿದೆ.**

6. **KDM Mark ಚಿನ್ನದ ಪದ್ದತಿ 2013 ರ ಹಿಂದೆ ಸುಮಾರು 10-15 ವರ್ಷಗಳ ಹಿಂದಿನಿಂದ ಚಾಲ್ತಿಯಲ್ಲಿತ್ತು.**

7. **21/62 ಮಾರ್ಕ್ ಚಿನ್ನದ ಪದ್ದತಿ ತುಂಬಾ ಹಳೆಯ ಪದ್ದತಿ.**

8. ನಾನು ಮಂಜುನಾಥರವರ ಮನೆಯಲ್ಲಿ ತೂಕ ಮಾಡಿದ ಚಿನ್ನದ ಆಭರಣಗಳು ಮೇಲೆ ಹೇಳಿದ ಪದ್ದತಿಗಳಲ್ಲಿ ಯಾವ ಕ್ವಾಲಿಟಿ **(Quality)** ಪದ್ದತಿಗೆ ಸೇರಿದೆ ಎಂದು ನಾನು ಮಹಜರಿನಲ್ಲಿ ತಿಳಿಸಿಲ್ಲ. ಸದರಿ ಚಿನ್ನದ ಆಭರಣಗಳು **21/62** ಮಾರ್ಕ್ ಚಿನ್ನದ ಪದ್ದತಿಯ ಚಿನ್ನಗಳು. ಸದರಿ ಪದ್ದತಿಯ ಚಿನ್ನದಲ್ಲಿ ಚಿನ್ನಕ್ಕಿಂತ ಬೆಳ್ಳಿಯ ಅಂಶ ಹೆಚ್ಚಿಗೆ ಇರುತ್ತದೆ ಎನ್ನುವುದು ಸರಿಯಲ್ಲ. ಆದರೆ ಚಿನ್ನವನ್ನು ಬೆಸುಗೆ ಮಾಡಲು ಬೆಳ್ಳಿಯನ್ನು ಉಪಯೋಗಿಸುತ್ತೇವೆ. **21/62** ಮಾರ್ಕ್ ಚಿನ್ನದ ಪದ್ದತಿ **2013** ಕ್ಕೂ ಹಿಂದೆ ಸುಮಾರು **15** ವರ್ಷಗಳಿಂದ ನಿಂತು ಹೋಗಿದೆ.

9. **2013 ರಲ್ಲಿ 1 ಗ್ರಾಂ ಚಿನ್ನದ ಬೆಲೆ 3,100 ರೂ. ಇರಬಹುದು. 1986-87 ರಲ್ಲಿ 1 ಗ್ರಾಂ ಚಿನ್ನದ ಬೆಲೆ ರೂ.300 ಇರಬಹುದು.**

10. ನಾನು ಮಂಜುನಾಥ್ ರವರ ಮನೆಯಲ್ಲಿ ತೂಕ ಮಾಡಿದ ಚಿನ್ನದ ಆಭರಣಗಳ ಬೆಲೆಯನ್ನು ಲೋಕಾಯುಕ್ತ ಪೊಲೀಸರಿಗೆ ತಿಳಿಸಿದ್ದೇನೆ. ನಿಶಾನೆ ಪಿ-**1** ಮಹಜರಿನಲ್ಲಿ ನಮೂದಿಸಿರುವ ಚಿನ್ನದ ಬೆಲೆಯನ್ನು ಲೋಕಾಯುಕ್ತ ಪೊಲೀಸರೇ ಊಹಿಸಿ ಕಲ್ಪನೆಯ ಮೇಲೆ ಬರೆದುಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಒಂದು ವೇಳೆ **2013** ಕ್ಕೂ ಹಿಂದೆ ಚಿನ್ನವನ್ನು ಖರೀದಿಸಿದ್ದರೆ, ಚಿನ್ನದ ಬೆಲೆಯಲ್ಲಿ ವ್ಯತ್ಯಾಸ ಇರುತ್ತದೆ ಎನ್ನುವುದು ಸರಿ.

ಮರುವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

***ಓ.ಹೇ.ಕೇ.ಸ.ಇದೆ.***

***ಪ್ರಧಾನ ಜಿಲ್ಲಾ*** *ಮತ್ತು ಸೆಷನ್ಸ್ ಹಾಗೂ ಸ್ಪೆಷಲ್*
***ನ್ಯಾಯಾಧೀಶರು, ಹಾಸನ.***